ವಿದ್ಯುಚ್ಛಕ್ತಿ ಯೋಜನೆ ಇದೆ ಇಬ್ಬರಿಂದ 500ಕೋಟಿ ರೂ.ಗಳ ಪ್ರಾಜೆಕ್ಟ್ ಇದು. ಸುಮಾರು 240 ಮೆಗಾವ್ಯಾಟ್ ವಿದ್ಯುಚ್ಛಕ್ತಿ ಉತ್ಪಾದನೆ ಮಾಡತಕ್ಕಂಥ ಒಂದು ಕಾರ್ಯಕ್ರಮವನ್ನು ಬಹಳ ವಿಧಾನಗತಿಯಲ್ಲಿ, ಮಂದಗತಿಯಲ್ಲಿ ನಡೆಸುತ್ತಿರುವುದರಿಂದ, ಈ ಎಲ್ಲಾ ವಿಚಾರದ ಮೇಲೆ ಆಂಧ್ರ ಸರ್ಕಾರದ ನಿಲುವನ್ನು ವಿರೋಧ ಮಾಡುತ್ತಾ ನಾನು ಸಭಾತ್ಯಾಗ ಮಾಡುತ್ತಿದ್ದೇನೆ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರಿ ಕೆ.ಎಸ್.ಪುಟ್ಟಣ್ಣಯ್ಯನವರು ಸಭಾತ್ಯಾಗ ಮಾಡಿದರು)

+ ಶ್ರೀ ಕೆ.ಎನ್.ನಾಗೇಗೌಡ (ಬೃಹತ್ ನೀರಾವರಿ ಸಚಿವರು):- ಮಾನ್ಯ ಉಪಾಧ್ಯಕ್ಷರೆ, ಅತ್ಯಂತ ಗಂಭೀರವಾಗಿತಕ್ಕಂಥ ವಿಚಾರವನ್ನು ನಮ್ಮ ವಿರೋಧ ಪಕ್ಷದ ನಾಯಕರಾದ ಶ್ರೀ ಯಡಿಯೂರಪ್ಪನವರು, ಕಾಂಗ್ರೆಸ್ ಪಕ್ಷದ ನಾಯಕರಾದ ಸನ್ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು, ಕನ್ನಡ ಚಳುವಳಿಯ ನಾಯಕರಾದಂಥ ವಾಟಾಳ್‌ರವರು, ನಮ್ಮ ಕಮ್ಯುನಿಸ್ಟ್ ಪಾರ್ಟಿಯ ನಾಯಕರಾದಂಥ ರೆಡ್ಡಿಯವರು, ನಮ್ಮ ರೈತ ಸಂಘದ ಮುಖಂಡರಾದಂಥ ಮಾನ್ಯ ಪುಟ್ಟಣ್ಣಯ್ಯನವರು ಎತ್ತಿದ್ದಾರೆ. ಮೊದಲನೆಯದಾಗಿ ಅವರನ್ನು ಅಭಿನಂದಿಸಬೇಕಾಗುತ್ತದೆ. ಅತ್ಯಂತ ಮಹತ್ವದ ವಿಚಾರವನ್ನು ಈ ಸದನದಲ್ಲಿ ಇಂದಿನ ಸಂದರ್ಭದಲ್ಲಿ ಅಗತ್ಯವಾಗಿ ಚರ್ಚೆ ಆಗಲೇಬೇಕಾದಂಥ ಕಾಲದಲ್ಲಿ ಎತ್ತಿದ್ದಾರೆ. ಆದಕ್ಕಾಗಿ ನಾನು ನಮ್ಮ ಸರ್ಕಾರದ ಪರವಾಗಿ ಅವರನ್ನು ಖಂಡಿತವಾಗಿ ಅಭಿನಂದಿಸುತ್ತೇನೆ. ಅದರಲ್ಲೂ ಸಹ ವಿ.ಪ.ದ ನಾಯಕರು ಮತ್ತು ಮಾನ್ಯ ಖರ್ಗೆಯವರು ಬಹುಪಾಲು ವಿಚಾರಗಳನ್ನು ನಾನೇನು ಹೇಳಬೇಕು ಎಂದಿದ್ದೆನೋ, ಆ ಎಲ್ಲಾ ವಿಚಾರಗಳನ್ನು ಅವರೇ ಹೇಳಿದ್ದಾರೆ. ಹೆಚ್ಚು ವಿಚಾರಗಳಲ್ಲಿ ಡಿಸ್‌ಪ್ಯೂಟ್ ಇರತಕ್ಕಂಥಾದ್ದು ಎಲ್ಲೂ ಇಲ್ಲ. ಅವರೂ ಸಹ ಕೆಲವಾರು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಖರ್ಗೆಯವರು ಯಾವ ಯಾವ ಸಂದರ್ಭದಲ್ಲಿ ಎಷ್ಟು ಎಷ್ಟು ಆಗಿದೆ ಎನ್ನತಕ್ಕಂಥ ವಿಚಾರವನ್ನು ಏನು ಪ್ರಸ್ತಾಪ ಮಾಡಿದ್ದಾರೆ ಅದು ಬಹುಪಾಲು ಸರಿ ಇದೆ ಎನ್ನತಕ್ಕಂಥ ಮಾತನ್ನು ನಾನು ಹೇಳುತ್ತೇನೆ.

ಈ ಜುರಾಲ ಪ್ರಾಜೆಕ್ಟ್‌ನ್ನು ದಿನಾಂಕ 4.8.1978ನೇ ಇಸವಿಯಲ್ಲಿ ನಮ್ಮ ರಾಜ್ಯಕ್ಕೆ ಮತ್ತು ಆಂಧ್ರಪ್ರದೇಶದವರಿಗೆ ಅಂದಿನ ಮುಖ್ಯಮಂತ್ರಿಗಳಾಗಿದ್ದ ಶ್ರೀಮಾನ್ ಡಿ.ದೇವರಾಜ ಅರಸ್ ಮತ್ತು ಚನ್ನರೆಡ್ಡಿಯವರುಗಳು ಇದ್ದಂತಹ ಕಾಲದಲ್ಲಿ ಇದರ ಬಗ್ಗೆ ಒಪ್ಪಂದವಾಗಿದೆ. 4.8.1978 ಅದರಲ್ಲಿ ಡಿಸ್ಕಷನ್‌ನಲ್ಲಿ ಬಹಳ ಪ್ರಾಮುಖ್ಯವಾದಂತಹ ಅಗ್ರಿಮೆಂಟ್ ನನ್ನ ಬಳಿಯಲ್ಲಿದೆ. ಆ ಅಗ್ರಿಮೆಂಟ್‌ನಲ್ಲಿ ಬಹಳ ಪ್ರಾಮುಖ್ಯವಾಗಿರತಕ್ಕಂತಹ ವಿಚಾರಗಳು ಎರಡು ಇವೆ. After the discussion the following points were agreed to:-

"Karnataka, Andhra Pradesh agreed that the AndhraPradesh would go ahead with the proposal Jural